ನನ್ನ ಗಂಟಲು, ತೊಡೆಗಳಲ್ಲಿ ಗಂಟುಗಳು ಏಳಲಿವೆ ಎನ್ನಿಸಿ ನಾನು ಸಂಪೂರ್ಣವಾಗಿ ಜರ್ಜರಿತನಾದೆ. ಅಂದು ನಾನು ಕ್ವಾರಂಟೈನ್‌ನಿಂದ ಓಡಿಹೋಗಬೇಕೆಂದುಕೊಂಡೆ. ನಾನು ಅಲ್ಲಿ ಇದ್ದಷ್ಟು ಹೊತ್ತೂ ಸಾವಿನ ಭಯದಿಂದ ನಡುಗುತ್ತಿದ್ದೆ. ಅಂದು ಭಾಗು ನನಗೆ ನೋಡಲು ಸಿಕ್ಕಿದ್ದು ಎರಡು ಬಾರಿ ಮಾತ್ರ.

ಅವತ್ತು ಮಧ್ಯಾಹ್ನದ ಹೊತ್ತಿಗೆ ಭಾಗು ಒಬ್ಬ ರೋಗಿಯನ್ನು ತಬ್ಬಿರುವುದನ್ನು ನೋಡಿದೆ. ರೋಗಿಯ ಕೈಯನ್ನು ಅವನು ಪ್ರೀತಿಯಿಂದ ಸವರುತ್ತಿದ್ದ. ರೋಗಿ ತನ್ನ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ, 'ಹೌದು ಭಾಯೀ! ಅಲ್ಲಾಹುವೇ ದೊಡ್ಡವನು... ಭಗವಂತ ಶತ್ರುಗಳನ್ನೂ ಇಲ್ಲಿಗೆ ಕಳಿಸಬಾರದು... ನನ್ನ ಇಬ್ಬರು ಹೆಣ್ಣು ಮಕ್ಕಳು...' ಎಂದು ಹೇಳುತ್ತಿದ್ದ.

ಭಾಗು ಅವನ ಮಾತನ್ನು ಅರ್ಧಕ್ಕೆ ನಿಲ್ಲಿಸಿ, 'ದೇವರ ದೇವ ಏಸುವಿಗೆ ಧನ್ಯವಾದ ಹೇಳು ಭಾಯೀ, ನಿನ್ನ ಆರೋಗ್ಯ ಸರಿಯಾಗುತ್ತೆ' ಎಂದ.

